ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದ ಕೆರೆಗಳ ಹೂಳು ತೆಗೆಯುವುದು.

2970:(4047)

ಶ್ರೀ ಮಹಾಂತೇಶ್ ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದಲ್ಲಿ ಬರುವ ಯಾವ ಯಾವ ಕೆರೆಗಳ ಹೂಳು ತೆಗೆಯಬೇಕೆಂದು ಮನವಿಗಳು ಬಂದಿವೆ? (ವಿವರ ಒದಗಿಸುವುದು)

ಆ) ಹೂಳು ತೆಗೆಯುವ ಕೆಲಸವನ್ನು ಪ್ರಾರಂಭ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು?

ಇ) ಬೈಲಹೊಂಗಲ ತಾಲ್ಲೂಕಿನ ದೊಡವಾಡ, ಬೈಲವಾಡ, ನನಗುಂದಿಕೊಪ್ಪ ಹಾಗೂ ಸವದತ್ತಿ ತಾಲ್ಲೂಕಿನ ಹಿರೇಕೊಪ್ಪ, ಮರಕುಂಬಿ ಹಾಗೂ ಇಂಚರ ಕೆರೆಗಳಲ್ಲಿರುವ ಹೂಳು ತೆಗೆಯಲು ರೈತರು ತಮ್ಮ ಟ್ರ್ಯಾಕ್ಟರ್ ಮುಖಾಂತರ ಸ್ವಯಂಪ್ರೇರಣೆಯಿಂದ ಹೂಳು ತೆಗೆದುಕೊಂಡು ಹೋಗಲು ತಯಾರಿ ಇದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು?

ಈ) ಈ ಕೆಲಸವನ್ನು ಕೂಡಲೇ ಪ್ರಾರಂಭಿಸಲಾಗುವುದೇ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) ಬೈಲಹೊಂಗಲ ಮತಕ್ಷೇತ್ರದ ಈ ಕೆಳಗೆ ತೋರಿದ ಕೆರೆಗಳ ಮನವಿಗಳು ಬಂದಿವೆ.

ಬೈಲಹೊಂಗಲ ತಾಲ್ಲೂಕು: 1) ದೊಡ್ಡವಾಡ ಕೆರೆ 2) ಗೋವನಕೊಪ್ಪ 3) ಬುಡರಕಟ್ಟಿ (4) ಸಿದ್ದಸಮುದ್ರ ಕೆರೆ 5) ಮಲ್ಲಾಪುರ ಕೆ.ಎನ್.ಕೆರೆ 6) ಬೆಲವಾಡ ಕೆರೆ ಹಾಗೂ ಸೌದತ್ತಿ ತಾಲ್ಲೂಕಿನ 1) ಇಂಚಲಕೆರೆ 2) ಮುರಗೋಡ ಕೆರೆ 3) ಹಿರಬುದನೂರ ಕೆರೆ 4) ಮಳಗಲಿ ಕೆರೆಗಳ ಬಗ್ಗೆ ಮನವಿಗಳು ಬಂದಿವೆ.

ಆ) ಮೇಲ್ಕಾಣಿಸಿದ ಕೆರೆಗಳ ಪೈಕಿ ಮಲ್ಲಾಪುರ ಎನ್ ಹಾಗೂ ಬೈಲವಾಡ ಕೆರೆಗಳ ಹೂಳು ತೆಗೆಯುವ ಕೆಲಸವನ್ನು ಇಲಾಖೆಯಿಂದ ಮಾಡಿ ಮುಗಿಸಲಾಗಿದೆ. ಇನ್ನುಳಿದ ಕೆರೆ ಹೂಳು ತೆಗೆಯುವ ಕಾಮಗಾರಿಗಳನ್ನು ಪರಿಶೀಲಿಸಿ ಕ್ರಿಯಾ ಯೋಜನೆ ಮಾಡಿ ಕ್ರಮ ಕೈಗೊಳ್ಳಲಾಗುವುದು.

ಇ) ಬೈಲಬಾಡ ಕೆರೆಯ ಹೂಳು ತೆಗೆಯುವ ಕೆಲಸವನ್ನು ಇಲಾಖಾ ವತಿಯಿಂದ ಈಗಾಗಲೇ ಮುಗಿಸಲಾಗಿದೆ. ಇನ್ನುಳಿದ ಕಾಮಗಾರಿಗಳನ್ನು ರೈತರ ಪಾಲ್ಗೊಳ್ಳುವಿಕೆಯನ್ನು ಪರಿಶೀಲಿಸಿ ಕ್ರಿಯಾ ಯೋಜನೆ ಮಾಡಿ ಮುಂದಿನ ಸಾಲಿನಲ್ಲಿ ಆಯವ್ಯಯಕ್ಕನುಗುಣವಾಗಿ ಕೆಲಸ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಈ) ಈ ಕೆಲಸಗಳು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸೇರ್ಪಡೆಯಾಗಿರುವುದಿಲ್ಲ. ಆದ್ದರಿಂದ ಕ್ರಿಯಾ ಯೋಜನೆ ಪ್ರಕಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಮಲೆನಾಡು ಅಭಿವೃದ್ಧಿ ಯೋಜನೆ

2972:(4044)

ಶ್ರೀ ಮಹಾಂತೇಶ್ ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1998-99ನೇ ಸಾಲಿನಲ್ಲಿ ಮಲೆನಾಡು ಅಭಿವೃದ್ಧಿ ಯೋಜನೆಯ ಆ್ಯಕ್ಷನ್ ಪ್ಲ್ಯಾನ್ ಅಪ್ರೂವ್ ಆಗಿದೆಯೇ?

ಆ) 1998-99ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತಕ್ಷೇತ್ರದಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲು ಒಪ್ಪಿಗೆ ನೀಡಲಾಗಿದೆ.

ಇ) ಈ ಕೆಲಸಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಎಂದು ನೀಡಲಾಯಿತು?

ಈ) ಇದುವರೆಗೆ ನೀಡದಿದ್ದಲ್ಲಿ ಇನ್ನು ಎಷ್ಟು ಅವಧಿಯೊಳಗೆ ಕೊಡಲಾಗವುದು?

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು):

ಅ) ಆಗಿದೆ.

ಆ) ವಿವರಗಳನ್ನು ಅನುಬಂಧ- 1ರಲ್ಲಿ ನೀಡಲಾಗಿದೆ.

ಇ) ಕ್ರಿಯಾ ಯೋಜನೆಯಲ್ಲಿ ಮಂಜೂರಾಗಿದ್ದ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಮಂಡಳಿಗೆ ಸಲ್ಲಿಸಲು ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಕೋರಿದ್ದು ಅವು ಬಂದ ಕೂಡಲೇ ಆಡಳಿತಾತ್ಮಕ ಮಂಜೂರಾತಿ ನೀಡಲಾಗುವುದು ಹಾಗೂ ತಾಂತ್ರಿಕ ಮಂಜೂರಾತಿಯನ್ನು ಅನುಷ್ಠಾನಗೊಳಿಸುವ ಸಂಸ್ಥೆಗಳು ನೀಡುವುವು.